**DW-1:** ವೀರಪ್ರತಾಪ

ದಿನಾಂಕಃ **29.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ಬೊಮ್ಮಲಿಂಗಪ್ಪ ಮತ್ತು ನಮ್ಮ ಪಡಿತರ ಚೀಟಿ ಬೇರೆ ಬೇರೆ ಇವೆ ಎಂದರೆ ಸರಿ. ಆವಲಪ್ಪ ರವರು ಅವಿದ್ಯಾವಂತರು. ಆವಲಪ್ಪ ರವರು ಹೆಬ್ಬೆರಳಿನ ಗುರುತನ್ನು ಮಾಡುತ್ತಾರೆ ಎಂದರೆ ಸರಿ. ಇಲ್ಲಿಯತನಕವೂ ಸಹ ದಾವಾ ಸ್ವತ್ತುಗಳ ಪಹಣಿ ಪತ್ರಿಕೆ ಆವಲಪ್ಪ ರವರ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಆವಲಪ್ಪ ರವರು ಮೃತಪಟ್ಟ ನಂತರ ವಾದಿ ದಾವಾ ಸ್ವತ್ತುಗಳ ಪಹಣಿ ತನ್ನ ಹೆಸರಿಗೆ ನಮೂದಿಸಬೇಕೆಂದು ತಾಲ್ಲೂಕು ಕಚೇರಿಗೆ ಅರ್ಜಿ ನೀಡಿದ್ದರು ಎಂದು ಗೊತ್ತಿಲ್ಲ. ವಾದಿ ಊಯಿಲಿನ ಆಧಾರದ ಮೇಲೆ ಖಾತೆ ಬದಲಾವಣೆ ಮಾಡುವಂತೆ ಅರ್ಜಿ ನೀಡಿದ್ದು ತಾಲ್ಲೂಕು ಕಚೇರಿಯವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸುವಂತೆ ಹೇಳಿದ ಮೇರೆಗೆ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಆವಲಪ್ಪ ರವರು ಮೃತಪಟ್ಟ ನಂತರ ನಾವು ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡಿದ ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಹೌದು ಆ ಸ್ವತ್ತು ನಮಗೂ ಸಹ ಸಂಬಂಧಪಟ್ಟಿರುವ ಕಾರಣ ತಕರಾರು ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇದ್ದು ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.